# ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

**ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-560001**

**ಸಂಖ್ಯೆ: ಕರಾಆ/ಆಡಳಿತ/09/2022** **ದಿನಾಂಕ: 28.12.2022**

## ಸುತ್ತೋಲೆ

**ವಿಷಯ :** **ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ 4ನೇ ಅಧ್ಯಾಯದಡಿಯಲ್ಲಿ ಗ್ರಾಹಕ ವ್ಯಾಜ್ಯಗಳ ಪರಿಹಾರ ಏಜೆನ್ಸಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಬಗ್ಗೆ-ಗ್ರಾಹಕ ಸಂರಕ್ಷಣಾ (ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಗಳು) ತಿದ್ದುಪಡಿ ನಿಯಮಗಳು, 2022ರ ಅನುಸಾರ ಪರಿಷ್ಕೃತ ಫಿರ್ಯಾದು ಶುಲ್ಕವನ್ನು ನಿಗದಿಪಡಿಸಿರುವ ಕುರಿತು**

**ಉಲ್ಲೇಖ :** **ಗ್ರಾಹಕ ವ್ಯವಹಾರಗಳ ಮಂತ್ರಾಲಯ, ಆಹಾರ ಮತ್ತು ಸಾರ್ವಜನಿಕ ವಿತರಣೆ, ಗ್ರಾಹಕ ವ್ಯವಹಾರಗಳ ಇಲಾಖೆ, ನವದೆಹಲಿ, ಇವರ ಅಧಿಸೂಚನೆ ದಿನಾಂಕ 20.12.2022**

- - - -

ಉಲ್ಲೇಖಿತ ಅಧಿಸೂಚನೆಯ ಅನುಸಾರ ಕೇಂದ್ರ ಸರ್ಕಾರವು ಗ್ರಾಹಕ ಸಂರಕ್ಷಣಾ (ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಗಳು) ತಿದ್ದುಪಡಿ ನಿಯಮಗಳು, 2022ನ್ನು ಜಾರಿಗೆ ತಂದು ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಮುಂದೆ ದಾಖಲಾಗುವ ಫಿರ್ಯಾದುಗಳಿಗೆ ಸಂಬಂಧಿಸಿದಂತೆ ಫಿರ್ಯಾದು ಶುಲ್ಕವನ್ನು ಪರಿಷ್ಕರಣೆ ಮಾಡಲಾಗಿರುವುದರಿಂದ, ಉಲ್ಲೇಖಿತ ಅಧಿಸೂಚನೆಯ ಪ್ರತಿಯನ್ನು ಇದರೊಡನೆ ಲಗತ್ತಿಸಿ ಕಳುಹಿಸಿಕೊಡುತ್ತಾ, ಸದರಿ ಅಧಿಸೂಚನೆ ಅನುಸಾರ ಪರಿಷ್ಕೃತ ಫಿರ್ಯಾದು ಶುಲ್ಕವನ್ನು ಸ್ವೀಕರಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಮಾನ್ಯ ಅಧ್ಯಕ್ಷರ ಆದೇಶಾನುಸಾರ,

28/12

(ವಿಜಯಕುಮಾರ್)
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿಗಳು,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ,
ಬಸವ ಭವನ, ಬೆಂಗಳೂರು.

ಪ್ರತಿಗಳು (ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ):

1. ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸ ಸೌಧ, ಬೆಂಗಳೂರು-ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ನ್ಯಾಯಾಂಗ ಸದಸ್ಯರು ಹಾಗೂ ಮಹಿಳಾ ಸದಸ್ಯರು, ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಪ್ರಧಾನ ಪೀಠ ಹಾಗೂ ಹೆಚ್ಚುವರಿ ಪೀಠ.
3. ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಮಹಿಳಾ ಸದಸ್ಯರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ (ಎಲ್ಲಾ ಜಿಲ್ಲಾ ಆಯೋಗಗಳಿಗೆ).
4. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು, ಬೆಂಗಳೂರು ವಕೀಲರ ಸಂಘ, ಬೆಂಗಳೂರು.
5. ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿಗಳು, ಎಲ್ಲಾ ಜಿಲ್ಲಾ ಆಯೋಗಗಳು (ಜಿಲ್ಲಾ ಆಯೋಗಗಳ ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.)
6. ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳ ಸಂಬಂಧಪಟ್ಟ ಇತರೆ ಅಧಿಕಾರಿ-ನೌಕರರಿಗೆ.
7. ರಾಜ್ಯ ಆಯೋಗದ ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.